**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

C.C. No.3134/2024

CW-9 PW:5

| | |
|---|---|
| ಸಾಕ್ಷಿಯ ಹೆಸರು | ಃ ಮಹೇಶ ರೇವಣಕರ್ |
| ತಂದೆ /ಗಂಡನ ಹೆಸರು | ಃ ಶ್ರೀಧರ |
| ವಯಸ್ಸು | ಃ 41 ವರ್ಷ |
| ಉದ್ಯೋಗ | ಃ ಅಕ್ಕಸಾಲಿಗ |
| ವಾಸಸ್ಥಳ | ಃ ಸಿಬಿಟಿ, ಹುಬ್ಬಳ್ಳಿ |

ದಿಃ 04.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ಒಂದು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಸುಮಾರು 2 ವರ್ಷದ ಹಿಂದೆ ಪಂಚನಾಮೆಗೆ ಸಹಿ ಮಾಡಿರುತ್ತೇನೆಂದು ಹೇಳಿ ತನ್ನ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ.8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಅಲ್ಲಿ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಪೊಲೀಸರು ನನ್ನನ್ನು Muthoot Finance ಗೆ ಕರೆದುಕೊಂಡು ಹೋಗಿದ್ದರು ಹಾಗೂ ಅಲ್ಲಿ ಬಂಗಾರ ತೂಕ ಮಾಡಬೇಕು ಎಂದು ಹೇಳಿದರು ಆದರೆ ಪೊಲೀಸ್ ಠಾಣೆಯಲ್ಲಿ ಬಂದು ಪಂಚನಾಮೆ ಮಾಡಿರುತ್ತಾರೆ. ನಿಪಿ.6 ಫೋಟೊದಲ್ಲಿ ನಾನು ಇದ್ದೇನೆ. ಅದನ್ನು ಭಗತ್ ಸಿಂಗ್ ಸರ್ಕಲ್ Muthoot Finance ನಲ್ಲಿ ತೆಗೆದಿರುತ್ತಾರೆ. ಪೊಲೀಸರು ಅಂದು ನನಗೆ ನವಗ್ರಹ ಬಂಗಾರದ ಉಂಗುರದ ಅಂದಾಜು ಕಿಮ್ಮತ್ತು ಎಷ್ಟು ಎಂದು ಕೇಳಿದರು ನಾನು ಅವರಿಗೆ ಹೇಳಿದೇನು. ಆ ದಿನ Muthoot Finance ನಲ್ಲಿ ಮತ್ತೆ

ಯಾರು ಇದ್ದರು ಎಂದು ನನಗೆ ನೆನಪು ಬರುತ್ತಿಲ್ಲ. ನಾನು ಬಂಗಾರ ತೂಕ ಮಾಡಿದ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದ ಃ**

ಆ ದಿನ Muthoot Finance ನಲ್ಲಿ ಚಾಸಾ.4 ಮತ್ತು 5 ಸಹ ಇದ್ದರು ಎಂದರೆ ಸಾಕ್ಷಿ ಬಹಳ ಜನ ಇದ್ದರು ಯಾರು ಎಂದು ನನಗೆ ಗೊತ್ತಿಲ್ಲ. ಆ ದಿನ ಚಾಸಾ.8 ರವರಿಂದ ಬಂಗಾರದ ಉಂಗುರವನ್ನು ಪೊಲೀಸರು ವಶಪಡಿಸಿಕೊಂಡರು ಎಂದರೆ ಇರಬಹುದು. ಆ ಸಮಯದಲ್ಲಿ ನನ್ನ ಜೊತೆ ಆರೋಪಿ ನಂ.1 ಮತ್ತು 3 ಸಹ ಇದ್ದರು ಎಂದರೆ ಸಾಕ್ಷಿ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.8 ಪಂಚನಾಮೆಗೆ ನಾನು Muthoot Finance ನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಆರೋಪಿಗಳು ಹಾಗೂ ಚಾಸಾ.4 ಮತ್ತು 5 Muthoot Finance ನಲ್ಲಿಯೇ ಇದ್ದರು ಹಾಗೂ ಅಲ್ಲಿಯೇ ಪಂಚಾನಮೆ ಜರುಗಿಸಿ ಅದಕ್ಕೆ ಸಹಿ ಮಾಡಿದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತಿತದೆದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿ ಪರ ಶ್ರೀ.ಕೆ ಬಿ ಎಸ್ ವಕೀಲರಿಂದಃ**

ನಾನು ಬಂಗಾರ ತೂಕ ಮಾಡಲು Muthoot Finance ಗೆ ಹೋದ ವಿಷಯ ನನಗೆ ಗೊತ್ತು ಆದರೆ ಯಾವ ವಿಷಯವಾಗಿ ಹೋಗಿದ್ದೇನು ಎಂದು ಗೊತ್ತಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(ಶ್ರೀಮತಿ ದೀಪಾ ಜಿ ಮನೇರಕರ)**

2 ನೇ ಅಧಿಕ ಪಿ.ದಿ.ನ್ಯಾ.ಹುಬ್ಬಳ್ಳಿ.